"ಬಿದ್ದಪ್ಪ, ಇವ್ನು ಸ್ಯಾಮುಯೆಲ್ ಯಾನೆ ಕನ್ನಿವೆಂಕಟೇಶ!"

"ಹೂದಾನಿ ಕೊಳ್ಳಲು ಬಂದವ್ನು? ಇವ್ನು ನಿನಗೆಲ್ಲಿ ಸಿಕ್ದ? ಇವ್ನ ಇನ್ನೊಂದು ಹೆಸ್ರು ನಿನಗೆ ಹೇಗ್ ತಿಳೀತು?"

"ಚಾರ್ಲಿ ಹೇಳಿದ್ದು ನೆನಪಿದೆಯಾ? ಇರುಳಲ್ಲಿ ಮನೆಗೆ ನುಗ್ಗಿದ ಚಿದಾನಂದ ಸ್ವಾಮಿಯು ನಿಗೂಢ ಪದ್ಯವನ್ನು ಒಂದು ನಂಬರಿಗೆ ಮೆಸೇಜ್ ಮಾಡಿದ್ದನಲ್ವೆ? ಆ ಫೋನೇ ಇವನದ್ದು. ನಾನು ಆ ಸಂಖ್ಯೆಯ ಬೆನ್ನು ಹಿಡಿದು ಹೋದಾಗ, ಇವ್ನ ಪರಿಚಯ ತಿಳಿಯಿತು. ಇವ್ನು ಕನ್ನಿವೆಂಕಟೇಶ. ಕೊಡಗಿನ ಕಹಳೆ ಪತ್ರಿಕೆಯ ವರದಿಗಾರ. ಆ ಚಿದಾನಂದನ ಮಿತ್ರ. ಅವ್ನೇ ಸ್ಯಾಮುಯೆಲ್ ಅಂತ ಹೇಗೆ ಪತ್ತೆ ಮಾಡಿದೆ ಗೊತ್ತೆ? ಚಾರ್ಲಿಯ ಬಳಿ ಹೂದಾನಿ ವಿಚಾರಿಸಿ ಬಂದದ್ದು ಸ್ಯಾಮುಯೆಲ್ ಅಂದಾಗ್ಲೇ ಗೊತ್ತಾಯ್ತು... ಅದು ಕನ್ನಿವೆಂಕಟೇಶನೇ ಎಂದು! ಇಲ್ಲದಿದ್ದರೆ, ಸ್ಯಾಮುಯೆಲ್ ಚಾರ್ಲಿಯ ಮನೆಗೆ ಹೇಗೆ ಮತ್ತು ಯಾಕೆ ಬಂದ? ಕನ್ನಿವೆಂಕಟೇಶ ಮತ್ತು ಸ್ಯಾಮುಯೆಲ್ ಇಬ್ಬರೂ ಒಬ್ಬರೇ ಅಂತ ತರ್ಕಿಸಿದೆ. ಅವ್ನು ಹೂದಾನಿಯ ಹಿಂದೆ ಬಿದ್ದದ್ದು ಗೊತ್ತಾದಾಗ ನನ್ನ ಅನುಮಾನ ಇನ್ನಷ್ಟು ದೃಢವಾಯಿತು. ನಿನ್ನೆ ಇವ್ನಿಗೆ ಫೋನು ಮಾಡಿ, ಬೆಳಿಗ್ಗೆ ಇಲ್ಲಿ ಬರುವಂತೆ ಸೂಚಿಸಿದೆ. ಕುಳಿತುಕೊಳ್ಳಿ, ಕನ್ನಿವೆಂಕಟೇಶ್."

"ನಿಮ್ಮಲ್ಲಿ ಕರಮಚಂದ ಯಾರು?... ಓಹ್... ನೀವೇ ತಾನೇ ಬರೋಕ್ ಹೇಳ್ದೋರು. ಎಸ್‌ಡಿ ಕಾರ್ಡ್ ಬಗ್ಗೆ ಮಾತಾಡೋದಿದೆ ಅಂದ್ರಿ..." ಕನ್ನಿವೆಂಕಟೇಶ ಒಲ್ಲದ ಮನಸ್ಸಿನಿಂದ ಕುರ್ಚಿಯಲ್ಲಿ ದೇಹ ಚೆಲ್ಲಿದ.

ಮೆಮೊರಿ ಕಾರ್ಡ್! ಯಾವುದರದ್ದು? ನಾನು ಕರಮಚಂದನನ್ನು ವಿಚಾರಿಸ್ದೆ.

"ಅದೊಂದು ಕೆಮರಾದ ಪುಟ್ಟ ಮೆಮೊರಿ ಕಾರ್ಡ್. ಚಿದಾನಂದ ಬಳಸಿದ್ದು. ಬಿದ್ದಪ್ಪ, ನಿನ್ಗೆ ಕೊಡಗಿನಲ್ಲಿ ಇತ್ತೀಚಿಗೆ ಹೆಚ್ಚುತ್ತಿರುವ ಡ್ರಗ್ಸ್ ಹಾವಳಿ ಬಗ್ಗೆ ಗೊತ್ತಲ್ವೆ? ಕಳೆದ ವರ್ಷ ಮಾದೇಶ ಅನ್ನೋ ಪತ್ರಕರ್ತ ನಿಗೂಢವಾಗಿ ಕಣ್ಮರೆಯಾಗಿದ್ದು ನೆನಪಿದೆ ತಾನೆ? ಡ್ರಗ್ಸ್ ಮಾಫಿಯಾ ಬೆನ್ನು ಹತ್ತಿ ಚಿದಾನಂದ ತನಿಖೆ ಶುರು ಮಾಡ್ದ. ಇದರಲ್ಲಿ ಒಬ್ಬ ಸ್ಥಳೀಯ ಪುಢಾರಿ ಒಳಗೊಂಡಿದ್ದ. ಅವ್ನ ಕಾಫಿ ಎಸ್ಟೇಟಿನಲ್ಲಿ ನಡುವೆ ಇರೋದು ಬರೀ ಗಾಂಜಾ ಬೆಳೆ. ಮರಿಜುವಾನ! ಅವ್ನು ಅದರ ಕಿಂಗ್ ಪಿನ್. ಚಿದಾನಂದ ಬುದ್ಧಿವಂತಿಕೆಯಿಂದ ಆತನ ಎಸ್ಟೇಟ್ ಪ್ರವೇಶಿಸಿ, ಎಲ್ಲಾ ವಿಡಿಯೊ ಮಾಡ್ದ. ಆ ಹೊತ್ತಿಗೆ ಆತನ ಮಂದಿ ಕಂಡು, ಚಿದಾನಂದನನ್ನು ಹಿಡಿಯಲು ಬಂದ್ರು. ಅವ್ನು ಪರಾರಿಯಾಗಿ, ಓಡುತ್ತಾ, ಚಾರ್ಲಿಯ ಮನೆಯೊಳಕ್ಕೆ ಸೇರಿಕೊಂಡ. ಅದಿಕ್ಕೂ ಮೊದ್ಲು ಅವ್ನು ತನ್ನ ಮಿತ್ರ ಕನ್ನಿವೆಂಕಟೇಶನಿಗೆ ಮಾಹಿತಿ ನೀಡ್ದ. ಚಾರ್ಲಿಯ ಮನೆಯಲ್ಲಿ ಚಿದಾನಂದ ಮುಂಜಾಗ್ರತಾ ಕ್ರಮವಾಗಿ ಎಸ್‌ಡಿ ಕಾರ್ಡನ್ನು ಹೂದಾನಿಯೊಳಗೆ ಅಡಗಿಸಿಟ್ಟ. ಕೆಲವು ಹೂದಾನಿಗಳ ತಳದಲ್ಲಿ ರಹಸ್ಯ ಅರೆಯಿರುತ್ತದೆ. ಅದರೊಳಗೆ ಇರಿಸಿ, ಚಾರ್ಲಿಯ ಮೊಬೈಲಿನಿಂದ ವೆಂಕಟೇಶನಿಗೆ ಪದ್ಯದ ಮೂಲಕ ಸೂಚನೆ ಕೊಟ್ಟ. ಅವರೊಳಗೆ ಈ ಸಂಕೇತಗಳ ಭಾಷೆ ಮಾಮೂಲು ಇರಲೇಬೇಕು. ಇಲ್ಲದಿದ್ರೆ ಅದನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಅವ್ನು ಚಾರ್ಲಿಯ ಫೋನು ಯಾಕೆ ಉಪಯೋಗಿಸಿದನೆಂದ್ರೆ, ಒಂದೊಮ್ಮೆ ತನ್ನ ಹಿಂಬಾಲಕರಿಗೆ ಸಿಕ್ಕಿಬಿದ್ರೆ, ಅವರು ಮೊಬೈಲು ನೋಡದ್ರೆ, ಕನ್ನಿವೆಂಕಟೇಶನ ಬಗ್ಗೆ ಗೊತ್ತಾಗುತ್ತೆ ಅಲ್ವೆ? ಜೊತೆಗೆ ಪದ್ಯದ ಅರ್ಥ ಕಂಡು ಹಿಡಿದ್ರೆ ಎಂಬ ದೂರಾಲೋಚನೆಯೂ! ಆದ್ರೆ ಅವರು ಆತನ ಕೊನೆಯ ಕರೆಯ ಜಾಡು ಹಿಡಿದು ನಂತ್ರ ವೆಂಕಟೇಶ್ ಹಿಂದೆ ಬಿದ್ದರು. ಅದು ಬೇರೆ ವಿಷ್ಯ."

"ಹಾಗಿದ್ರೆ ಆ ಎಸ್‌ಡಿ ಕಾರ್ಡ್ ಈಗೆಲ್ಲಿದೆ? ತಂಗರಾಜು ಮನೆಯಿಂದ ನಾಚಿಯಪ್ಪನ್ ಜನ